ಎಷ್ಟು ಹೊತ್ತು ನಿದ್ರಿಸಿದೆ ಎಂದು ಊಹಿಸದಾದೆ. ಕೈಕಾಲು ಮಡಚಿ ಚಾಚಿ ಶರೀರದ ಆಲಸ್ಯವನ್ನು ದೂರ ಮಾಡಲು ಪ್ರಯತ್ನಿಸಿದೆ. ಕತ್ತನ್ನು ಹೊರಳಿಸಿ ಮೆದುಳನ್ನು ಸಕ್ರಿಯಗೊಳಿಸಲು ಪ್ರಯತ್ನಿಸಿದೆ. ಮನುಷ್ಯ ಸತ್ತ ನಂತರ ಎಲ್ಲಿಗೆ ಹೋಗುತ್ತಾನೆ? ವಾಸ್ತವವಾಗಿ ಸ್ವರ್ಗ, ನರಕ ಅಥವಾ ಈ ಎರಡರ ನಡುವಿನ ಲೋಕವಿದೆಯೇ? ಇವುಗಳಲ್ಲಿ ಒಂದು ಲೋಕಕ್ಕೆ ಮನುಷ್ಯ ಸತ್ತ ನಂತರ ಹೋಗುವನೇ? ಅಥವಾ ಅವನ ಆತ್ಮ ಬ್ರಹ್ಮಾಂಡದಲ್ಲಿ ಅಲೆಯುವುದೇ? ಎಂದೆಲ್ಲಾ ಯೋಚಿಸಿದೆ.

ಆತ್ಮ... ಈ ಶಬ್ದ ಆಧುನಿಕ ಯುಗದಲ್ಲಿ ಅದೆಷ್ಟು ವಿಚಿತ್ರವಾಗಿ ಕಾಣ ಬರುತ್ತದೆ! ನಾವೇನು ಕೇಳಿದ್ದೇವೋ, ಏನು ಕಲಿತಿದ್ದೇವೋ, ನಾವೇನು ನೋಡಿದ್ದೇವೋ ಈ ಎಲ್ಲದಕ್ಕಿಂತ ಜೀವನ ಹೊರತಾಗಿದೆ ಎಂದು ನನಗೆ ಅನೇಕ ಬಾರಿ ಭಾಸವಾಗುತ್ತದೆ. ಆತ್ಮಗಳಿಗೂ ಅವುಗಳದೇ ಆದ ಜಗತ್ತು ಇರುತ್ತದೆ. ವ್ಯಕ್ತಿ ಸತ್ತಾಗ ಅವನ ದೇಹ ನಾಶವಾಗುತ್ತದೆ. ಆದರೆ ಅವನ ಶರೀರವಿಲ್ಲದ ಆತ್ಮ, ಚೈತನ್ಯ ಮತ್ತು ಶಕ್ತಿ ಜೀವಂತವಾಗಿರುತ್ತದೆ. ಅವು ಈ ಲೋಕದ ಬೇರೊಂದು ಪದರಕ್ಕೆ ಹೋಗುತ್ತವೆ; ಅವು ನಮಗೆ ಈ ಆಯಾಮದಲ್ಲಿ ಕಾಣಿಸುವುದಿಲ್ಲ. ನಮ್ಮ ಐದು ಭೌತಿಕ ಇಂದ್ರಿಯಗಳು ಅವುಗಳ ನಿರಂತರ ಅಸ್ತಿತ್ವವನ್ನು ಪ್ರತಿಬಿಂಬಿಸುವುದಿಲ್ಲ; ಅಂದರೆ ಅವು ಇಲ್ಲಿಲ್ಲ ಎಂದಲ್ಲ. ನಮ್ಮ ಸುತ್ತಮುತ್ತಲು ಏನಿದೆಯೋ, ನಾವು ಅದರ ಮೂರನೇ ಒಂದರಷ್ಟು ಮಾತ್ರ ಮನಗಾಣುತ್ತೇವೆ, ಉದಾಹರಣೆಗೆ ನಾವೆಂದೂ ಒಂಟಿಯಾಗುವುದಿಲ್ಲ. ಅದೆಷ್ಟೋ ಜೀವಿಗಳು ನಮ್ಮ ಸುತ್ತಮುತ್ತ ನಿರಂತರವಾಗಿ ಚಲಿಸುತ್ತಾ ಇರುತ್ತವೆ. ಬಾಲ್ಯದ ಪ್ರಸಂಗವೊಂದನ್ನು ಹೇಳುತ್ತೇನೆ... ಜೇಮ್ಸ್ ನನ್ನ ಗೆಳೆಯನಾಗಿದ್ದ. ಗ್ಲಾಸ್ಗೋದಲ್ಲಿ ನಾವಿಬ್ಬರು ಅಕ್ಕಪಕ್ಕದಲ್ಲಿ ವಾಸಿಸುತ್ತಿದ್ದೆವು; ಇಬ್ಬರು ಒಟ್ಟಿಗೆ ಅಧ್ಯಯನ ಮಾಡುತ್ತಿದ್ದೆವು. ಒಟ್ಟಿಗೆ ಚೆಂಡು, ಫುಟ್ಬಾಲ್ ಆಡುತ್ತಿದ್ದೆವು, ಸೈಕಲ್‌ನಲ್ಲಿ ಸಂಚರಿಸುತ್ತಿದ್ದೆವು, ಹತ್ತು ಹನ್ನೆರಡು ವಯಸ್ಸಿನ ಬಾಲಕರು ಮಾಡುವಂಥ ಚೇಷ್ಟೆಗಳನ್ನೂ ಮಾಡುತ್ತಿದ್ದೆವು. ರಾತ್ರಿ ವೇಳೆಯಲ್ಲಿ ಭಯ ಹುಟ್ಟಿಸುವಂಥ ಮಾಯದ ಆಟ 'ಪೆರಾನಾರ್ಮಲ್' ಮುಂತಾದವುಗಳನ್ನೂ ಆಡುತ್ತಿದ್ದೆವು. ನಮಗೆ ಇನ್ನೊಂದರಲ್ಲಿ ಆಸಕ್ತಿಯಿತ್ತು, ಅದು ಆತ್ಮಗಳೊಂದಿಗೆ ಸಂಪರ್ಕಿಸುವುದಾಗಿತ್ತು. ಆಗ ನಮ್ಮ ವಯಸ್ಸು ಹನ್ನೆರಡು ಹದಿಮೂರಿರಬೇಕು... ನಾವು ಉಯಿಜಾ ಬೋರ್ಡಿನಲ್ಲಿ ಆತ್ಮಗಳೊಂದಿಗೆ ಸಂಪರ್ಕವನ್ನು ಸಾಧಿಸುತ್ತಿದ್ದೆವು.

ನನಗೆ ಅಂದಿನ ಆ ದಿನ ಇಂದಿಗೂ ಚೆನ್ನಾಗಿ ನೆನಪಿದೆ. ಹ್ಯಾಲೋವಿನ್ ಹಬ್ಬದ ದಿನ. ಸಂಜೆಯ ಏಳು ಗಂಟೆ. ವಿಟ್‌ಚೆಸ್ ಅಂದರೆ ಭೂತನಿಗಳ ವೇಳೆ ಜೇಮ್ಸ್ ಮತ್ತು ನಾನು ಉಯಿಜಾ ಬೋರ್ಡ್ ಮತ್ತು ಒಂದು ಬಿಳಿಯ ಮೇಣದ ಬತ್ತಿಯೊಂದಿಗೆ ಜೇಮ್ಸ್ ಮನೆಯ ಹಿಂಭಾಗದ ಮೆಟ್ಟಿಲುಗಳಿಂದ ಇಳಿದು ಗ್ಯಾರೇಜಿಗೆ ಹೋದೆವು, ಗ್ಯಾರೇಜ್ ಒಂದು ಗುಹೆಯಂಥ ಜಾಗದಲ್ಲಿತ್ತು. ನಾವು ಮೇಣದ ಬತ್ತಿಯನ್ನು ಹೊತ್ತಿಸಿದೆವು. ಬೋರ್ಡ್ ಹಾಕಿದೆವು, ಬತ್ತಿ ಆರಿಸಿ ಕಾಯಲು ಆರಂಭಿಸಿದೆವು. ಏನೂ ಘಟಿಸಲಿಲ್ಲ.

'ಒಂದು ಸತ್ತ ಆತ್ಮವನ್ನು ಕರೆಯೋಣ?' ನಾನು ಪಿಸುಗುಟ್ಟಿದೆ.

'ಯಾರದ್ದು?' ಜೇಮ್ಸ್ ಕೇಳಿದ.

ನಮ್ಮ ಗಲ್ಲಿಯಲ್ಲಿ ಎರಡು ದಿನಗಳ ಹಿಂದೆ ಆಫ್ರಿಕನ್ ಹುಡುಗಿಯೊಬ್ಬಳು ಸತ್ತಿದ್ದಳು. ಅವಳ ಹೆಸರು ಕೋಫೋ ಎಂದಿತ್ತು. ನಾವು ಪಾರ್ಕ್‌ನಲ್ಲಿ ಆಡುವುದನ್ನು ನೋಡಿ ಅವಳೂ ನಮ್ಮೊಂದಿಗೆ ಆಡಲು ಬರುತ್ತಿದ್ದಳು. ಆದರೆ ಸಾಮಾನ್ಯವಾಗಿ ನಮಗೂ ಅವಳಿಗೂ ಜಗಳವಾಗುತ್ತಿತ್ತು. ನಾವು ಅವಳನ್ನು 'ನಿಗರ್', ಮತ್ತು 'ನೀಗ್ರೋ' ಎಂದು ಚುಡಾಯಿಸುತ್ತಿದ್ದೆವು. ಅವಳು ರೇಗುತ್ತಿದ್ದಳು. ನಂತರ ಅವಳು ಇದ್ದಕ್ಕಿದ್ದಂತೆ ನಮಗೆ ಕಾಣಿಸದಾದಳು. ಬಹುಶಃ ಅವಳು ನಮ್ಮೊಂದಿಗೆ ಸಿಟ್ಟಾಗಿದ್ದಾಳೆ, ಹೀಗಾಗಿ ನಮ್ಮೊಂದಿಗೆ ಆಡಲು ಬರುವುದಿಲ್ಲ ಎಂದು ನಾವು ಯೋಚಿಸಿದೆವು. ಆದರೆ ಅದೊಂದು ದಿನ ಅವಳ ಆರೋಗ್ಯ ಸರಿಯಿಲ್ಲ, ಅವಳ ಕೆಂಪು ರಕ್ತಕಣಗಳಲ್ಲಿ ದೋಷವಿದೆ, ಅದೊಂದು ಅನುವಂಶಿಕ ರೋಗ ಎಂಬ ಸುದ್ದಿಯನ್ನು ಕೇಳಿದೆವು. ನಂತರ ಇದ್ದಕ್ಕಿದ್ದಂತೆ ಕೋಫೋ ಸತ್ತಳು ಎಂಬುದು ತಿಳಿಯಿತು. ಅವಳ ತಂದೆತಾಯಿ ಯಾರಿಗೂ ತಿಳಿಯದಂತೆ ಅವಳ ಶವವನ್ನು ಹೂತರು. ಅಕ್ಕಪಕ್ಕದವರಿಗೂ ಇದು ತಿಳಿಯಲಿಲ್ಲ. ಯಾರೂ ಅವಳ ಮನೆಗೆ ತಮ್ಮ ದುಃಖವನ್ನು ವ್ಯಕ್ತಪಡಿಸಲು ಹೋಗದಾದರು. ಆದರೆ ಸಮಾಜ ಸುಧಾರಕರಾದ ನನ್ನ ಅಮ್ಮ ಬಲವಂತವಾಗಿ ಅವರ ಮನೆಗೆ ಹೋದರು. ಬಾಗಿಲ ಗಂಟೆಯನ್ನು ಒತ್ತಿದಾಗ ಕೋಫೋಳ ತಂದೆಯೇ ಬಾಗಿಲ ಬಳಿಗೆ ಬಂದು ಅಮ್ಮನೊಂದಿಗೆ ಮಾತನಾಡಿದರು. ಅವಳ ಅಮ್ಮ ಕೋಣೆಯಿಂದ ಹೊರಗೂ ಬರಲಿಲ್ಲ.

ನಾನು ಜೇಮ್ಸ್‌ಗೆ ಸಲಹೆಯಿತ್ತೆ, 'ಕೋಫೋಳ ಆತ್ಮವನ್ನು ಕರೆಯೋಣ...'

'ಕೋಫೋ ಆತ್ಮ... ಬೇಡಪ್ಪಾ...' ಜೇಮ್ಸ್ ಭಯದಿಂದ ಹೇಳಿದ, 'ಅವಳು ಬದುಕಿದ್ದಾಗ, ನಾವು ಅವಳಿಗೆ ತುಂಬಾ ತೊಂದರೆ ಕೊಟ್ಟಿದ್ದೇವೆ...'

'ಇರಲಿ, ಕರೆಯೋಣ...ಅವಳು ಬರ್ತಾಳೋ, ಇಲ್ಲವೋ ನೋಡೋಣ.'

ನಾನು ಹಟ ಹಿಡಿದ ನಂತರ ಜೇಮ್ಸ್ ಒಪ್ಪಿದ. ನಾವಿಬ್ಬರು ನರ್ವಸ್ ಆಗಿದ್ದೆವು. ಆದರೆ ನಾವು ನಮ್ಮ ನಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಕೋಫೋಳನ್ನು ಕರೆದೆವು. ನಮ್ಮಿಬ್ಬರ ನಡುವೆ ಮೇಣದ ಬತ್ತಿ ಉರಿಯುತ್ತಿತ್ತು, ಅದರ ಬೆಳಕಿನಲ್ಲಿ ನಮ್ಮ ವಿಶಾಲ ನೆರಳು ಗೋಡೆಯ ಮೇಲೆ ಬೀಳುತ್ತಿತ್ತು. ಸುತ್ತಮುತ್ತ ಅಂಧಕಾರ ಮತ್ತು ಮೌನ ಕವಿದಿತ್ತು.

ತುಂಬಾ ಹೊತ್ತು ಏನೂ ಘಟಿಸಲಿಲ್ಲ.

'ಏನೂ ಆಗುತ್ತಿಲ್ಲ' ನಾನು ಪಿಸುಗುಟ್ಟಿದೆ.

'ಸ್ವಲ್ಪ ತಾಳು' ಎಂದ ಜೇಮ್ಸ್.

ಅಷ್ಟರಲ್ಲಿ ಕಿಟಕಿಯ ಹೊರಗೆ ಕಪ್ಪು ಆಗಸದಲ್ಲಿ ಗುಡುಗು ಮಿಂಚಿನ ಸದ್ದಾಯಿತು. ತೀವ್ರ ವೇಗದ ಗಾಳಿ ಒಳಗೆ ನುಗ್ಗಿತು. ಮೇಣದ ಬತ್ತಿಯ ಜ್ವಾಲೆ ಜೋರಾಗಿ ಅಲುಗಾಡಿತು. ಗ್ಯಾರೇಜಿನಲ್ಲಿ ನಿಂತಿದ್ದ ಕಾರು ಸಹ ಸದ್ದು ಮಾಡಿತು. ಗ್ಯಾರೇಜಿನಲ್ಲಿದ್ದ ವಸ್ತುಗಳೆಲ್ಲವೂ ಅಲುಗಾಡಿದವು. ನಾನು ಭಯದಿಂದ ಓಟಕಿತ್ತೆ, ಆದರೆ ಅಗಲೇ ಜೇಮ್ಸ್ ನನ್ನ ಶರ್ಟಿನ ತುದಿಯನ್ನು ಹಿಡಿದುಕೊಂಡು ರೋದಿಸುವ ಭಂಗಿಯಲ್ಲಿ ಹೇಳಿದ, 'ಪಾಲ್, ನೀನು ಹೀಗೆ ಓಡಲಾರೆ. ಮೊದಲು ಆ ಕಪ್ಪು ಭೂತವನ್ನು ಓಡಿಸು...'

ನನಗೆ ಜೇಮ್ಸ್‌ನ ಭಯ ಅರ್ಥವಾಗುತ್ತಿತ್ತು. ನಾವಿಬ್ಬರೂ ಭಯದಿಂದ ಥರಥರ ಕಂಪಿಸುತ್ತಿದ್ದೆವು, ನಮ್ಮ ಹಲ್ಲುಗಳು ಕಟಕಟ ಸದ್ದುಗೈಯುತ್ತಿದ್ದವು, ಆದರೆ ನಾವು ಬೋರ್ಡಿನ ಎರಡೂ ಕಡೆ ಕೂತು, ಕಣ್ಣುಗಳನ್ನು ಮುಚ್ಚಿಕೊಂಡು ವಿನಮ್ರತೆಯಿಂದ ಪ್ರಾರ್ಥಿಸಿದೆವು.

'ಕೋಫೋ, ನೀನಿಲ್ಲಿಗೆ ಬಂದಿದ್ದಕ್ಕಾಗಿ ಧನ್ಯವಾದಗಳು. ನಾವು ನಿನಗೆ ತುಂಬಾ ಆಭಾರಿಯಾಗಿದ್ದೇವೆ. ದಯವಿಟ್ಟು ಈಗ ಮರಳಿ ಹೋಗು. ನೀನು ಬಂದ ಲೋಕಕ್ಕೇ ಮರಳಿ ಹೋಗು. ನಿನ್ನಲ್ಲಿ ವಿನಂತಿಸಿಕೊಳ್ಳುತ್ತೇವೆ, ನೀನಿಲ್ಲಿಂದ ದಯವಿಟ್ಟು ಹೊರಟು ಹೋಗು. ನಾವೆಂದೂ ನಿನಗೆ ತೊಂದರೆಯನ್ನು ಕೊಡುವುದಿಲ್ಲ. ವಿ ಆರ್ ವೆರಿ ಸಾರಿ! ನಮ್ಮನ್ನು ಕ್ಷಮಿಸು...'

ಸ್ವಲ್ಪ ಹೊತ್ತಿನಲ್ಲಿ ಬೋರ್ಡ್ ಅಲುಗಾಡುವುದು ನಿಂತಿತು. ಮೇಣದ ಬತ್ತಿಯ ಬೆಳಕು ಸಹ ಸ್ಥಿರವಾಗಿ ಎಲ್ಲಾ ಶಾಂತವಾಯಿತು. ಆದರೆ ಅಂದಿನ ನಂತರ ನಾವು ಆತ್ಮಗಳೊಂದಿಗೆ ಸಂಪರ್ಕಿಸುವುದನ್ನು ಕೈಬಿಟ್ಟೆವು. ನಮಗೆ ಇದೊಂದು ಆಟವಲ್ಲ ಎಂಬುದು ಅರ್ಥವಾಯಿತು.

ವರ್ಷಗಳ ಹಿಂದೆ ಮನಸ್ಸಿನಲ್ಲಿ ಒತ್ತಿ ಹಿಡಿದಿದ್ದ ಭಯ ಹೊರ ಬಂತು. ಸತ್ತವರು ಸಹ ಮತ್ತೆ ಜೀವಂತವಾಗಬಹುದೇ ಎಂಬ ವಿಚಾರ ದಟ್ಟವಾಯಿತು... ನನ್ನ ಮನಸ್ಸು ದುರ್ಬಲವಾಯಿತು. ನಾನು ಥರಥರ ಕಂಪಿಸಿದೆ. ನನ್ನ ಹೆಜ್ಜೆಗಳು ಮುಂದಕ್ಕೆ ಹೋಗದಾದವು. ನಾನು ಕೆಳಗಿದ್ದ ತಣ್ಣನೆಯ ನೆಲದ ಮೇಲೆ ಕೂತೆ. ನನ್ನ ಅಂಗೈಗಳಿಂದ ನನ್ನ ಮುಖವನ್ನು ಮುಚ್ಚಿಕೊಂಡೆ. ನನಗೆ ಇದೇನಾಗುತ್ತಿದೆ? ಹಲ್ಲುಗಳು ಕಟಕಟ ಸದ್ದು ಮಾಡಿದವು. ಸತ್ತವರು ಮತ್ತೆ ಜೀವಂತವಾಗಲಾರರು ಎಂಬ ಜೀವನದ ಅಂತಿಮ ಸತ್ಯದ ಬಗ್ಗೆ ಜಗತ್ತಿಗೆ ಅಖಂಡ ವಿಶ್ವಾಸವಿದೆ. ಹಾಗಾದರೆ ಅದೇನಾಗಿತ್ತು...?

ನೀನಾಳ ಆತ್ಮ!

ಅಯ್ಯೋ ದೇವರೇ!

ಇಲ್ಲ!

ಹುಚ್ಚ...! ನನ್ನನ್ನೇ ನಾನು ಹಳಿದುಕೊಂಡೆ. ಇದು ಭ್ರಮೆ... ನೀನು ಅಸಂಬದ್ಧವಾಗಿ ಯೋಚಿಸುತ್ತೀಯ! ನೀನಾ ಭೂತ ಪಿಶಾಚಿಯಲ್ಲ. ಅವಳ ಆತ್ಮ ಎಲ್ಲೂ ಅಲೆಯುತ್ತಿಲ್ಲ.

ನಾನು ಸುತ್ತಮುತ್ತ ನೋಡಿದೆ. ದಟ್ಟ ಅಂಧಕಾರವಿದ್ದು ಮೌನ ಕವಿದಿತ್ತು. ದೂರದವರೆಗೆ ಹಬ್ಬಿದ ಪೊದೆಗಳು ಮತ್ತು ಮರಗಳು. ಇವುಗಳನ್ನು ಹೊರತುಪಡಿಸಿ ಬೇರೇನೂ ಇಲ್ಲ.

(ಸಶೇಷ)